

# ಬೃಹತ್ ಬುದ್ಧ

ಚೀನಾದ ಎಮಿ ಪರ್ವತ ಪ್ರದೇಶದ ಬಳಿ ಸಾಂಪ್ರದಾಯಿಕ ಪದ್ಧತಿಯಲ್ಲಿ ಕಟ್ಟಿರುವ ಪುರಾತನವಾದ 30 ಬೌದ್ಧ ಗುಡಿಗಳಿವೆ. ಕಡಿದಾದ ಕೋಡುಗಲ್ಲಿನ ಬಂಡೆಯ ಮೇಲೆ, ಬೌದ್ಧ ಭಿಕ್ಕುವಿನಿಂದ ಕಟ್ಟಲ್ಪಟ್ಟ ಇದು ಚೀನಾದ ದಕ್ಷಿಣಕ್ಕಿರುವ ಸೆಜುವಾನ್ ಪ್ರಾಂತ್ಯದ ಲೆಶಾನ್ ನಗರದಲ್ಲಿದೆ. 71 ಮೀಟರ್ (ಸುಮಾರು 233 ಅಡಿ) ಎತ್ತರವಾಗಿರುವ ಇದು, ಇಡೀ ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಬುದ್ಧಮೂರ್ತಿಯೆಂಬ ಹೆಗ್ಗಳಿಕೆ ಪಡೆದಿದೆ.

1996ರ ಡಿಸೆಂಬರ್‌ನಲ್ಲಿ ಇದು ಯುನೆಸ್ಕೋ ವಿಶ್ವ ಪರಂಪರೆಯ ಪಟ್ಟಿಗೆ ಸೇರ್ಪಡೆಯಾಗಿದೆ. ಮಿಂಜಿಯಾಂಗ್,ದಾದು ಮತ್ತು ಕ್ವಿನ್‌ಗ್ವಿ ನದಿಗಳ ಸಂಗಮದತ್ತ ಮುಖ ಮಾಡಿ ಕುಳಿತಿರುವ ಈ ಮೂರ್ತಿ 8ನೇ ಶತಮಾನದಲ್ಲಿ ಟಾಂಗ್ ರಾಜವಂಶಸ್ಥರಿಂದ ಕೆತ್ತಲ್ಪಟ್ಟಿದೆ. ಹಚ್ಚಹಸಿರಾದ ಗಿಡಮರಗಳ ಹಿನ್ನೆಲೆಯಲ್ಲಿ ಕೆಂಪು ಬಣ್ಣದಲ್ಲಿ ಕಂಗೊಳಿಸುವ ಈ ಬುದ್ಧಮೂರ್ತಿ ಬರೀ ಸುಂದರವಾಗಿರುವುದು ಮಾತ್ರವಲ್ಲ, ಅತ್ಯುನ್ನತ ವಾಸ್ತುಕಲೆಯನ್ನೂ ಹೊಂದಿದೆ.  ಈ ಭಗವಾನ್ ಬುದ್ಧನ ಭುಜಗಳು ಬರೋಬ್ಬರಿ 28 ಮೀಟರ್ (92 ಅಡಿ) ಅಗಲವಾಗಿದ್ದು ಬ್ಯಾಸ್ಕೆಟ್‌ಬಾಲ್ ಆಟದ ಮೈದಾನದಷ್ಟು ದೊಡ್ಡದಿದೆ. ಒಂದೊಂದು ಕಾಲಿನ ಮೇಲೆಯೂ ಸುಮಾರು 100 ಕ್ಕೂ ಹೆಚ್ಚು ಜನ ಕುಳಿತುಕೊಳ್ಳಬಹುದು. ಮತ್ತು ಪ್ರತಿಯೊಂದು ಪಾದವೂ ತಲಾ 11 ಮೀಟರ್ ಉದ್ದವಿದೆ. ಕಲಾಪೂರ್ಣವಾದ ಈ ಮೂರ್ತಿಯ ತಲೆಯಲ್ಲಿ ಗುಂಗುರು ಕೂದಲಿರುವ 1021 ಸುರುಳಿಯಾಕಾರದ ಗಂಟುಗಳಿವೆ. ತಲೆಯಲ್ಲಿ ಅಖಂಡವಾಗಿರುವಂತೆ ತೋರುವ ಈ ಎಲ್ಲಾ 1021 ಗಂಟುಗಳು ಅತ್ಯಂತ ನಾಜೂಕಾಗಿ ಕೆತ್ತಲ್ಪಟ್ಟಿವೆ.

**ವಿದ್ಯಾ ವಿ. ಹಾಲಭಾವಿ**

